ಅವರು ಸದನದಲ್ಲಿರಲು ಹೇಳುತ್ತೇನೆ. ನಾಳೆ ತಮಗೆ ಈ ವಿಷಯ ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆ.

(6) ತಮಿಳು ನಾಡಿನಿಂದ ಡಾಂಬರ್ ಸರಬರಾಜಿನಲ್ಲಿ ವಿಳಂಬ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಬಹುಶಃ ಎಲ್ಲಾ ಶಾಸಕರಿಗೂ ಸಹ ತುಂಬ ನೋವಾಗಿದೆ. ಮಳೆಗಾಲ ಪ್ರಾರಂಭವಾಗಲು ಇನ್ನು ಎರಡು ಮೂರು ತಿಂಗಳುಗಳು ಮಾತ್ರ ಇದೆ. ಮದ್ರಾಸ್‌ನಿಂದ ಡಾಂಬರ್ ಬರಲಿಲ್ಲವೆಂದು ಒಂದು ತಾಲ್ಲೂಕಿನಲ್ಲೂ ಒಂದು ಕಿಲೋ ಮಿಟರ್ ರಸ್ತೆಯನ್ನು ಮಾಡಿಲ್ಲ. ಯಾವುದೇ ತಾಲ್ಲೂಕಿನಲ್ಲಿ ಇರಬಹುದು, ಶಾಸಕರು ಮೂವತ್ತು ಲಕ್ಷ ರೂಪಾಯಿಗಳ ಯೋಜನೆಯಲ್ಲಿ ರಸ್ತೆ ಕೆಲಸ ಮಾಡುವುದಿರಬಹುದು, ಬೇರೆ ಯಾವುದೇ ಯೋಜನೆಗಳಿರಬಹುದು, ಆಸ್‌ಫಾಲ್ಟ್ ಇಲ್ಲದೆ ತಾಲ್ಲೂಕುಗಳಲ್ಲಿ ರಸ್ತೆ ಮಾಡುವ ಕೆಲಸ ನಿಂತಿದೆ. ಸಿಮೆಂಟ್, ಕಬ್ಬಿಣದ ಸರಬರಾಜು ಇಲ್ಲದೆಯೇ ಕಟ್ಟಡ ಕೆಲಸ ನಿಂತಿದೆ. ತಮಿಳುನಾಡಿನವರು ಕಾಂಬಿರನ್ನು ಕೊಡದಿದ್ದರೆ ಪರ್ಯಾಯವಾದ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು : ನಾಳೆ ಇದರ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತೇನೆ. ಇಲ್ಲಿಗೆ ಶೂನ್ಯ ವೇಳೆ ಮುಕ್ತಾಯವಾಯಿತು, ಇನ್ನು ಗಮನಸೆಳೆಯುವ • ಸೂಚನೆಗಳು.

ಗಮನ ಸೆಳೆಯುವ ಸೂಚನೆಗಳು

ರಾಜ್ಯದ ಬರಗಾಲ ಪೀಡಿತ ಹಾಗೂ ಗುಡ್ಡಗಾಡು ಪ್ರದೇಶದ ಜನರಿಗೆ ಗೋಧಿಯ ಮೇಲೆ ಕೇಂದ್ರ ಸರಕಾರ ಕೊಡುವ ವಿಶೇಷ ಸಹಾಯಧನವನ್ನು ನೀಡದಿರುವುದು.

ಶ್ರೀ ಜಗದೀಶ. ಟಿ. ಪಾಟೀಲ್ (ಶ್ರೀ ಡಿ.ಆರ್. ಪಾಟೀಲ್ ರವರ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದ ಬರಗಾಲ ಪೀಡಿತ (ಡಿಪಿಎಪಿ) ಹಾಗೂ ಗುಡ್ಡಗಾಡು ಪ್ರದೇಶದ ಜನರಿಗೆ ಗೋಧಿಯ ಮೇಲೆ ಕೇಂದ್ರ ಸರ್ಕಾರ ಕೊಡುವ ವಿಶೇಷ ಸಹಾಯಧನವನ್ನು ನೀಡದಿರುವುದರಿಂದ ಕಡುಬಡವ ಗ್ರಾಹಕರಿಗೆ ಅನ್ಯಾಯವಾಗಿರುವ ಬಗ್ಗೆ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎನ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) : ಮಾನ್ಯ ಅಧ್ಯಕ್ಷರೇ ರಾಜ್ಯ ಸರ್ಕಾರವು ಸಹಾಯ ಧನಯುಕ್ತ ಆಹಾರ ಧಾನ್ಯಗಳನ್ನು ಬಡತನ ರೇಖೆಗಿಂತ ಕಡಿಮೆ ಆದಾಯ ಇರುವ ಬಡಕುಟ್ಟುಂಬಗಳಿಗೆ ಅಕ್ಕಿ ಹಾಗೂ ಗೋಧಿಯನ್ನು ವಿತರಿಸುತ್ತಿದೆ. ಸಹಾಯಧನಯುಕ್ತ ಆಹಾರಧಾನ್ಯ ವಿತರಣಾ ಯೋಜನೆಯಲ್ಲಿ ದಿನಾಂಕ: 1-4-1995 ರಿಂದ ಜಾರಿಗೆ ಬರುವಂತೆ ಅಕ್ಕಿಯನ್ನು ಪ್ರತಿ ಕೆ.ಜಿ.ಗೆ ರೂ. 3.20 ರಂತೆ ಹಾಗೂ ದಿನಾಂಕ 1-11-1995 ರಿಂದ ಜಾರಿಗೆ ಬರುವಂತೆ • ಗೋಧಿಯನ್ನು ಪ್ರತಿ ಕೆ.ಜಿ.ಗೆ. ರೂ. 2.00 ರಂತೆ ವಿತರಿಸುತ್ತಿದೆ.

ಈ ಯೋಜನೆಯ ಫಲವನ್ನು ಡಿ.ಪಿ.ಎ.ಪಿ. ಪ್ರದೇಶದಲ್ಲಿರುವ ಬಡಜನರನ್ನು ಒಳಗೊಂಡಂತೆ ಬಡತನ ರೇಖೆಗಿಂತ ಕಡಮೆ ಆದಾಯ ಇರುವ ಬಡಕುಟುಂಬಗಳಿಗೆ ವಿಸ್ತರಿಸಲಾಗಿದೆ. ಆದುದರಿಂದ, ಸರ್ಕಾರವು ಡಿ.ಪಿ.ಎ.ಪಿ. ಪ್ರದೇಶದಲ್ಲಿ ವಾಸಿಸುತ್ತಿರುವ ಬಡಕುಟುಂಬಗಳಿಗೂ ಹಾಗೂ ಇತರೇ ಪ್ರದೇಶಗಳಲ್ಲಿ ವಾಸಿಸುವ ಬಡಕುಟುಂಬಗಳಿಗೂ ಆಹಾರಧಾನ್ಯ ವಿತರಣಾ ಬೆಲೆಯಲ್ಲಿ ವಿವಿಧ ನೀತಿ ಅನುಸರಿಸುವುದು ಸೂಕ್ತವಲ್ಲ.